ಅಸಲು ದಾವೆ ಸಂಖ್ಯೆ -288/2013
ಪಿ.ಡಬ್ಲ್ಯೂ - 01
ದಿನಾಂಕಃ 21-01-2026
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಸ್ ಕೆ ವಕೀಲರಿಂದ**

ದಾವಾ ಆಸ್ತಿ 2 ಗುಂಟೆ ಇದೆಯೋ ಅಥವಾ 2.1/2 ವರೆ ಗುಂಟೆ ಇದೆಯೋ ಎಂದರೆ 2.1/2 ಇದೆ. ಪೂರ್ವ-ಪಶ್ಚಿಮ, ಉತ್ತರ – ದಕ್ಷಿಣ ಎಷ್ಟು ಅಳತೆ ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಉದ್ದ – ಅಗಲ ಎಷ್ಟು ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಖುಲ್ಲಾ ಜಾಗಾ ಇದೆಯೋ ಅಥವಾ ಮನೆ ಇದೆಯೋ ಎಂದರೆ ಖುಲ್ಲಾ ಜಾಗೆ ಇದೆ. ದಾವಾ ಆಸ್ತಿಯು 2.1/2 ಗುಂಟೆ ಇದೆ ಎಂದು ಠರಾಯಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ನೀವೇನಾದರೂ ಅರ್ಜಿಯನ್ನು ಸಲ್ಲಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ತೀರಿಕೊಂಡಿದ್ದಾರೆ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಯರು ನಿಮ್ಮ ಕಬ್ಜಾಕ್ಕೆ ಹೇಗೆ ಹರಕತ್ ಮಾಡಿದರು ಎಂದು ಹೇಳಲು ಆಗುತ್ತದೆಯಾ ಎಂದರೆ ನಾವು ಮನೆ ಕಟ್ಟಬೇಕಾದರೆ ಅವರುಗಳು ಬಂದು ಇದು ನಮ್ಮ ಜಾಗ ಎಂದು ಹರಕತ್ ಮಾಡಿರುತ್ತಾರೆ. ದಾವಾ ಆಸ್ತಿಯು ಅಂದಿನಿಂದ ಇಂದಿನವರೆಗೂ ಪ್ರತಿವಾದಿಯರ ಕಬ್ಜೆಯಲ್ಲಿಯೇ ಇದೆ ಎಂದರೆ ಸರಿಯಲ್ಲ. ಮುಂದುವರೆದು ನಮ್ಮ ಕಬ್ಜೆಯಲ್ಲಿಯೇ ಇದೆ.

ದಾವಾ ಆಸ್ತಿಯಲ್ಲಿ 2013 ನೇ ಇಸವಿಯಲ್ಲಿ ನೀವು ಮನೆಯನ್ನುಕಟ್ಟಿಸುವ ತೆಯಾರಿ ನಡೆಸಿದ್ದರಿ ಆ ಮನೆ ಈಗ ಪೂರ್ಣ ಗೊಂಡಿದೆಯಾ ಎಂದರೆ ತಕರಾರು ಮಾಡಿದ ಕಾರಣ ನಾವು ಮನೆಯನ್ನು ಕಟ್ಟಿಸಿರುವುದಿಲ್ಲ. ಆ ವೇಳೆಯಲ್ಲಿ ನೀವು ಕೇವಲ ಒಂದು ಟ್ರಾಕ್ಟರ ನಷ್ಟು ಮಾತ್ರ ಕಲ್ಲನ್ನು ಹೊಡೆಸಿದ್ದೀರಿ ಎಂದರೆ ಸರಿ. ಅದನ್ನು ಹೊರತುಪಡಿಸಿ ನೀವು ಬೇರೆ ಯಾವುದೇ ಕಾಮಗಾರಿ ಕೆಲಸವನ್ನು ಕೈಗೊಂಡಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯು 1 ಮತ್ತು 2 ನೇ ಪ್ರತಿವಾದಿಯರ ಮಾಲ್ಕಿ ಆಸ್ತಿ ಇದ್ದು ಅವರಿಗೆ ತೊಂದರೆ ಕೊಡುವ ಸಲುವಾಗಿ ಈ ದಾವೆಯನ್ನು ಮಾಡಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯು 1 ಮತ್ತು 2 ನೇ ಪ್ರತಿವಾದಿಯ ಕಬ್ಜಾ ವಹಿವಾಟಿನಲ್ಲಿ ಇತ್ತು ಮತ್ತು ಈಗಲೂ ಇದೆ ಎಂದರೆ ಸರಿಯಲ್ಲ. ನೀವು ಕೇಳಿರುವ ಮಾಗಣಿಯನ್ನು ಪಡೆಯಲು ನೀವು ಅರ್ಹರಿರುವದಿಲ್ಲ ಎಂದರೆ ಸರಿ. ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.